**ಸಾಕ್ಷಿಯನ್ನು ದಿನಾಂಕ: 28-03-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಈ ದಿನ ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳನ್ನು ವಕೀಲರು ನನಗೆ ಓದಿ ತಿಳಿಸಿರುತ್ತಾರೆ. ಆದ್ದರಿಂದ, ನನ್ನ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆ ಎಂದು ಪರಿಗಣಿಸಬೇಕಾಗಿ ಕೋರುತ್ತೇನೆ.

**ಮುಂದುವರೆದ ಮುಖ್ಯ ವಿಚಾರಣೆ :- ವಾದಿ ಪರ ವಕೀಲರಿಂದಃ**

ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿರುತ್ತೇನೆ.

1) ನಮ್ಮ ಕುಟುಂಬದ ನೋಟರಿ ಮಾಡಿದ ವಂಶವೃಕ್ಷದ ಪ್ರಮಾಣ ಪತ್ರ.

2) ದಾವಾ ಜಮೀನುಗಳಿಗೆ ಸಂಬಂಧಿಸಿದ 6 ಗಣಕೀಕೃತ ಪಹಣಿ ಪತ್ರಿಕೆಗಳು.

3) ಎರಡು ಕ್ರಯಪತ್ರಗಳ ದೃಢೀಕೃತ ನಕಲುಗಳನ್ನು ಹಾಜರು ಮಾಡಿರುತ್ತೇನೆ.

**ಸದರಿ ದಾಖಲೆಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-9 ಎಂದು ಗುರುತಿಸಲಾಯಿತು.**

**(ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ.**